**O.S. 21/2018**
**P.W.-1**

**O.S. 21/2016**
**P.W.-1**

ಸಾಕ್ಷಿಯನ್ನು ದಿನಾಂಕ **16-07-2025** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ವಾದಿ ಪರ ಶ್ರೀ ಆರ್.ಹೆಚ್.ಎಸ್. ವಕೀಲರಿಂದ.

ನನ್ನ ಮಗಳು ಎಂ.ಸಿ. ಪಿ.ಹೆಚ್.ಡಿ. ಮಾಡಿರುತ್ತಾರೆ. ನನ್ನ ಮಗಳ ಮದುವೆ 2008 ರಲ್ಲಿ ಮಾಡಿರುತ್ತೇವೆ. ನನ್ನ ಅಳಿಯ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರೋಪೇಸರ್ ಆಗಿ ಕೆಲಸ ಮಾಡುತ್ತಿರುತ್ತಾರೆ. ವಾದಿ ಕುವೆಂಪು ಯುವರ್ಸಿಟಿಯಲ್ಲಿ ಗೆಸ್ಟ್ ಲೆಕ್ಚರರ್ ಆಗಿ ಮದುವೆ ಮುಂಚಿನಿಂದಲೂ ಕೆಲಸ ಮಾಡುತ್ತಿದ್ದರು. ಆಕೆ ಹಾಸ್ಟೆಲ್ ನಲ್ಲಿ ಉಳಿದುಕೊಳ್ಳುತ್ತಿದ್ದರು. ಆಕೆ ಏನು

ವ್ಯವಹಾರ ಮಾಡುತ್ತಿದ್ದಳು ಎಂದರೆ ಸಾಕ್ಷಿ ಕೆಲವು ವಿಚಾರ ಮಾತ್ರ ತಿಳಿಯುತ್ತಿತ್ತು ಕೇಸಿನ ವಿಚಾರ ತಿಳಿದಿರುತ್ತದೆ. ಆಕೆ ಬ್ಯಾಂಕ್ ಮತ್ತು ಇನ್ಶೂರೆನ್ಸ್ ಬಗ್ಗೆ ಸಂಪೂರ್ಣ ಮಾಹಿತಿ ಇತ್ತಾ ಬಗ್ಗೆ ಸಾಧಾರಣ ಮಾಹಿತಿ ಇತ್ತು ಎನ್ನುವರು. ವಾದಿ ಮದುವೆ ಆದ ನಂತರ ಬೆಂಗಳೂರಿನಲ್ಲಿ ವಾಸ ಮಾಡಲು ಪ್ರಾರಂಭಿಸಿರುತ್ತಾರೆ. ಗಂಡ-ಹೆಂಡತಿ ಮಧ್ಯೆ ಏನು ವ್ಯವಹಾರ ನಡೆಯುತ್ತಿತ್ತು ಎಂದು ನನಗೆ ಸ್ವಾಭಾವಿಕವಾಗಿ ತಿಳಿಯುತ್ತಿತ್ತು ಎನ್ನುವರು. ನನಗೆ ಅವರ ವ್ಯವಹಾರದ ಬಗ್ಗೆ ಖುದ್ದು ಮಾಹಿತಿ ಇರಲಿಲ್ಲ ಎಂದರೆ ಸರಿ. ವಾದಿಯ ಬ್ಯಾಂಕ್ ಅಕೌಂಟ್ ಬೆಂಗಳೂರಿನಲ್ಲಿ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಖಾಯಂ ವಾಸ ಮತ್ತು ಅವರ ಖಾತೆ ಬ್ಯಾಂಕ್ ನ ಖಾತೆ ಬೆಂಗಳೂರಿನಲ್ಲಿ ಇರುತ್ತದೆ ಎಂದರೆ ಸರಿ. ವಾದಿಯ ಬ್ಯಾಂಕ್ ನ ಖಾತೆ ಸಹ ಬೆಂಗಳೂರಿನಲ್ಲಿ ಇರುತ್ತದೆ. ನನ್ನ ಮಗಳು ಖಾಯಂ ಆಗಿ ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಗಳು ಬೆಳ್ತಂಗಡಿಯಲ್ಲಿ ವಾಸ ಮಾಡುತ್ತಾರೆ ಎಂದು ವ್ಯವಹಾರ ಆದ ನಂತರ ತಿಳಿದು ಬಂದಿರುತ್ತದೆ. 4 ನೇ ಪ್ರತಿವಾದಿ ಪುತ್ತೂರಿನಲ್ಲಿ ವಾಸ ಮಾಡುತ್ತಾರೆ. 3 ನೇ ಪ್ರತಿವಾದಿಯ ಬ್ಯಾಂಕ್ ನ ಖಾತೆ ಆನಂದಪುರದಲ್ಲಿರುತ್ತದೆ. ನನ್ನ ಮಗಳು ನನ್ನ ಮನೆಗೆ ಆಗಾಗ ಬರುತ್ತಿದ್ದರು. 1 ನೇ ಪ್ರತಿವಾದಿ ನಮ್ಮ ಮನೆಗೆ ಬಂದು ಹಣ ಬೇಡಿಕೆ ಇಟ್ಟಾಗ ನಾನು, ನನ್ನ ಹೆಂಡತಿ, ವಾದಿ ಮತ್ತು ಅವರ ಮಗ ಹಾಜರಿದ್ದ. ಹಣವನ್ನು ಹೂಡಿಕೆ ಮಾಡಲು 1 ಮತ್ತು 2 ನೇ ಪ್ರತಿವಾದಿ ನನ್ನ ಮತ್ತು ನನ್ನ ಮಗಳಿಗೆ ಒಟ್ಟಾಗಿ ಕೇಳಿರುತ್ತಾರೆ. ವಾದಿ ಮನೆಯಿಂದ 1 ನೇ ಪ್ರತಿವಾದಿ ಮನೆಗೆ 25 ಕಿ.ಮೀ. ಅಂತರವಿರುತ್ತದೆ. ಅವರ ನಡುವೆ ಕೆಲಸ ಇದ್ದಾಗ ಪರಸ್ಪರ ಭೇಟಿಯಾಗುತ್ತಿದ್ದರು. 1 ಮತ್ತು 2 ನೇ ಪ್ರತಿವಾದಿ ಮನೆಗೆ ಬಂದು

ಹಣ ಕೇಳಿದ ವಿಚಾರವನ್ನು ಬೆಂಗಳೂರಿನಲ್ಲಿ 1 ಮತ್ತು 2 ನೇ ಪ್ರತಿವಾದಿ ಹಾಗೂ ವಾದಿ ಮಾತನಾಡಿಕೊಂಡಿರುತ್ತಾರೆ. ಬೆಂಗಳೂರಿನಲ್ಲಿ ಮಾತುಕತೆಯಾದಾಗ ನಾನು ಇರಲಿಲ್ಲ. ಹಣ ವರ್ಗಾವಣೆಯಾದಾಗ ನಾನು ಹಾಜರಿರಲಿಲ್ಲ ಆದರೆ ವರ್ಗಾವಣೆ ಆದ ಬಗ್ಗೆ ವಾದಿ ನನಗೆ ತಿಳಿಸಿರುತ್ತಾರೆ. ಪ್ರತಿವಾದಿ 1 ಮತ್ತು 2 ರವರು ಎಷ್ಟು ಹಣ ಹೂಡಿಕೆ ಮಾಡಬೇಕೆಂದು ನಿಖರವಾಗಿ ಹೇಳಿರುವುದಿಲ್ಲ ಆದರೆ ಎಷ್ಟು ಸಾಧ್ಯವೋ ಅಷ್ಟುಕೊಡಿ ಎಂದು ಹೇಳಿರುತ್ತಾರೆ. ಅವರಿಗೆ ಕೆಲಸ ಸಿಗಬೇಕಾದರೆ 1 ಕೋಟಿ ಹೂಡಿಕೆ ಮಾಡಬೇಕಾಗುತ್ತದೆ ಆ ಕಾರಣ ನಿಮಗೆ ಎಷ್ಟು ಸಾಧ್ಯವಾಗುತ್ತದೋ ಅಷ್ಟು ಮಾಡಿ ಎಂದು ಹೇಳಿರುತ್ತಾರೆ. ಹೂಡಿಕೆ ಮಾಡಿರುವ ಬಗ್ಗೆ ಮೆಸೆಜ್ ಮಾಡಿರುವುದಿಲ್ಲ ಆದರೆ ಹಣ ಬಂದಿರುತ್ತದೆ ಎಂದು ಮೆಸೆಜ್ ಮಾಡಿರುತ್ತಾರೆ. ಜೀವವಿಮೆಯಲ್ಲಿ ಯಾವುದೇ ಹೂಡಿಕೆ ಮಾಡಲು ಬರುವುದಿಲ್ಲ ಎಂಬ ವಿಚಾರ ನನ್ನ ಮಗಳಿಗೆ ಗೊತ್ತಿತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುವರು. ಹೆಚ್.ಡಿ.ಎಫ್.ಸಿ. ಲೈಫ್ ನಲ್ಲಿ ಹೂಡಿಕೆ ಮಾಡುವ ಬಗ್ಗೆ ಯಾವುದಾದರು ದಾಖಲೆಯನ್ನು ನೋಡಿದ್ದೀರಾ ಎಂದರೆ ಇಲ್ಲಾ ಎನ್ನುವರು. ವಾದಿ ಹೆಚ್.ಡಿ.ಎಫ್ .ಸಿ. ಲೈಫ್ ನಲ್ಲಿ ಕನ್ಸಲ್ ಟೆಂಟ್ ಆಗಲು ಪರೀಕ್ಷೆ ಬರೆದಿದ್ದರು ಎಂದರೆ ಸರಿ. ಆಕೆ ಅದರಲ್ಲಿ ಉತ್ತೀರ್ಣ ಳಾಗಿ ಆಕೆ ಕನ್ಸ್ ಲ್ಟೆಟೆಂಟ್ ಆಗಿ ಒಂದು ಕೋಡ್ ನೀಡಲಾಗಿತ್ತು ಎಂದರೆ ಇರಬಹುದು ಎನ್ನುವರು. ಸದರಿ ಕನ್ಸ್ ಲ್ಟೆಂಟ್ ನ ಕವರಿಂಗ್ ಲೆಟರ್ ಅನ್ನು ಸಾಕ್ಷಿಗೆ ತೋರಿಸಿದ್ದು ಆತ ಒಪ್ಪಿದ ಮೇರೆಗೆ ನಿ.ಡಿ.-1 ಎಂದು ಗುರುತಿಸಲಾಯಿತು. ಆತ ಅಲ್ಲಿ ಕನ್ಸ್ ಲ್ಟೆಂಟ್ ಆಗಿ ಯಾವುದೇ ಕೆಲಸ ಮಾಡಿರುವುದಿಲ್ಲ. 2 -3 ಕೇಸ್ ಗಳನ್ನು 1 ನೇ ಪ್ರತಿವಾದಿ ತಂದು ವಾದಿಯ ಹೆಸರಿನಲ್ಲಿ ದಾಖಲು ಮಾಡಿಸಿರುತ್ತಾರೆ. 1 ನೇ ಪ್ರತಿವಾದಿ ಯಾವುದೇ ಕೇಸ್

ಗಳನ್ನು ತಂದಿರುವುದಿಲ್ಲ ಸ್ವತಃ ನನ್ನ ಮಗಳೇ ಕೆಲವು ಪಾಲಿಸಿಗಳನ್ನು ಮಾಡಿರಸಿತ್ತಾರೆ ಎಂದರೆ ಸರಿಯಲ್ಲ. ನಾನು ನೋಡಿದಂತೆ ಅಂದರೆ ಅವರ ಮನೆಗೆ ಬೆಂಗಳೂರಿಗೆ ಹೋದಾಗ ಆಕೆ ಹೆಚ್.ಡಿ.ಎಫ್.ಸಿ. ಲೈಫ್ ಇನ್ಶೂರೆನ್ಸ್ ಕಛೇರಿಗೆ ಹೋಗಿರುವುದಿಲ್ಲ. ನನ್ನ ಮಗಳು ಕನ್ಸ್ ಲ್ ಟೆಂಟ್ ಆಗಿ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನನ್ನ ಮಗಳು ಕನ್ಸ್ ಲ್ ಟೆಂಟ್ ಆಗಿ ಕೆಲಸ ಮಾಡಿದ ಕಾರಣ ಆಕೆಗೆ ಲೈಫ್ ಇನ್ಶೂಸರೆನ್ಸ್ ನಲ್ಲಿ ಹಣ ಹೂಡಿಕೆ ಮಾಡಲು ಬರುವುದಿಲ್ಲ ಎಂದು ಆಕೆಗೆ ತಿಳಿದಿತ್ತು ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾರಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ**.)**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ.